

ಮಂತ್ರಿ ಅಪಾರ ಅನುಭವಸ್ಥ. ಜಗತ್ತಿನ ವ್ಯವಹಾರವನ್ನು ಕಂಡವನು. ರಾಜ, ಕೋಪದಲ್ಲಿ ಮಾಡಿದ ಆಜ್ಞೆಯನ್ನೂ ಅರಿತುಕೊಂಡು ತತ್ಕಾಲಕ್ಕೆ ಸುಮ್ಮನಾದನು. ಮಂತ್ರಿ ಅವಳನ್ನು ತನ್ನ ಮಗಳಂತೆ ಮನೆಯಲ್ಲಿ ಇರಿಸಿಕೊಂಡ. ರಾಜಕುಮಾರಿ ಸೌಗಂಧಿಕಾಳಿಗೂ ತನ್ನ ತಪ್ಪಿನ ಅರಿವಾಯಿತು. ಮುಂದಿನ ವರ್ಷವೂ ಜಗನ್ನಾಥ ಸ್ವಾಮಿಯ ರಥೋತ್ಸವ ಬಂತು. ಪದ್ಧತಿಯಂತೆ ಮಹಾರಾಜ ಚಿನ್ನದ ಪೊರಕೆಯಿಂದ ರಥ ಸಾಗುವ ದಾರಿಯನ್ನು ಗುಡಿಸಹತ್ತಿದ. ಬೀದಿಯ ನಡುವೆ ಯಾರೋ ದಿಢೀರನೇ ಅವನ ಕುತ್ತಿಗೆಗೆ ಹಾರ ಹಾಕಿದರು. ತಲೆಯೆತ್ತಿ ನೋಡಿದಾಗ ಮುಸುಕು ಹಾಕಿದ್ದ ತರುಣಿ ಕಂಡಳು!

ಅವಳ ಹಿಂದೆಯೇ ಬಂದ ಮಂತ್ರಿಗಳು, 'ಮಹಾರಾಜರೇ! ನಿಮ್ಮ ಆಜ್ಞೆಯಂತೆಯೇ ಒಬ್ಬ ಕಸಗುಡಿಸುವವನಿಗೆ ರಾಜಕುಮಾರಿಯನ್ನು ಮದುವೆ ಮಾಡಿಸುತ್ತಿದ್ದೇನೆ' ಎಂದು ಹೇಳಿದ. ಎದುರಿಗೆ ರಾಜಕುಮಾರಿ ಸೌಗಂಧಿಕಾ ನಿಂತಿದ್ದಳು. ರಾಜನಿಗೆ ಬಹಳ ಕೋಪ ಬಂತು. ಆಗ ಮಂತ್ರಿಯು, 'ಕೋಪ ಮಾಡಿಕೊಳ್ಳಬೇಡಿ, ರಾಜಕುಮಾರಿ ಈ ಸಂಪ್ರದಾಯದ ಹಿನ್ನೆಲೆ ತಿಳಿಯದೆ, ನಿಮ್ಮ ಬಗ್ಗೆ ತಪ್ಪು ತಿಳಿದಿದ್ದರು. ಅನಂತರ ಅವರು ಬಹಳ ಪಶ್ಚಾತ್ತಾಪ ಪಟ್ಟಿದ್ದಾರೆ. ಇಷ್ಟು ದಿವಸಗಳ ಕಾಲ ನನ್ನ ಮನೆಯಲ್ಲಿ ಮಗಳಂತೆ ಇದ್ದ ಈ ರಾಜಕುಮಾರಿಯ ಎಲ್ಲಾ ಗುಣಗಳನ್ನು ನಾನು ನೋಡಿದ್ದೇನೆ. ನಮ್ಮ ರಾಜ್ಯಕ್ಕೆ ಇವರಂಥ ಮಹಾರಾಣಿ ಸಿಗಲಾರರು. ದಯಮಾಡಿ ಇವರನ್ನು ಮಹಾರಾಣಿಯಾಗಿ ಸ್ವೀಕರಿಸಿ' ಎಂದ. ಸೌಗಂಧಿಕಾಳನ್ನು ವರಿಸಲು ರಾಜ ಒಪ್ಪಿಕೊಂಡ. ನಂತರ ವೈಭವದಿಂದ ವೀರಸುಧನ್ವ ಮತ್ತು ಸೌಗಂಧಿಕಾರ ಮದುವೆ ನೆರವೇರಿತು.

ಈಗಲೂ ಸುಧನ್ವನ ವಂಶಸ್ಥರು ಪುರಿ ಜಗನ್ನಾಥ ರಥೋತ್ಸವದ ದಿನ ಚಿನ್ನದ ಪೊರಕೆಯಿಂದ ರಥಬೀದಿಯನ್ನು ತಮ್ಮ ವಂಶದ ಪದ್ಧತಿಯಂತೆ ಗುಡಿಸುತ್ತಾರಂತೆ.

(ಸಂಗ್ರಹ)